ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**3745/2023.**</u>
ದಿನಾಂಕಃ**17.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ರೇವಣ್ಣ ಕೆ ಎಸ್ | ಚಾಸಾ-2, ಪ್ರಾಸ-2 |
| ತಂದೆಯ ಹೆಸರು | ಶಿವಣ್ಣ | |
| ವಯಸ್ಸು | 36 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಕೋಡಿಹಳ್ಳಿ ಗ್ರಾಮ ಕಡೂರು ತಾಲ್ಲೂಕು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 1, 3 ರಿಂದ 10 ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರು ಗೊತ್ತು.

ಚಾಸಾ 1 ಮತ್ತು 1 ನೇ ಆರೋಪಿಯ ಮದುವೆಯು ದಿಃ12.08.2017 ಮತ್ತು ದಿಃ13.08.2017 ರಂದು ಕಡೂರಿನ ಶಾರಾದಮ್ಮ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಸದರಿ ಮದುವೆಯ ಮಾತುಕತೆಯಲ್ಲಿ ನಾನು, ಚಾಸಾ 3, 4, 6 ರಿಂದ 10 ಹೋಗಿದ್ದೆವು ಹಾಗೂ ಆರೋಪಿತರ ಕುಟುಂಬದ ಪೈಕಿ ಆರೋಪಿಗಳು ಮತ್ತು ಅವರ ಸಂಬಂಧಿಕರು ಇದ್ದರು. ಮದುವೆಯ ಮಾತುಕತೆ ಹುಡುಗನ ಮನೆಯಲ್ಲಿ ಆಗಿರುತ್ತದೆ. ಸದರಿ ಮಾತುಕತೆಯಲ್ಲಿ ಆರೋಪಿತರ ಕುಟುಂಬದವರಿಗೆ ವರದಕ್ಷಿಣೆಯಾಗಿ ರೂ.5 ಲಕ್ಷ ಹಣ, 25 ಗ್ರಾಂ ಚಿನ್ನ ನೀಡುವಂತೆ ತೀರ್ಮಾನವಾಗಿರುತ್ತದೆ. ಮಾತುಕತೆಯಂತೆ ಮದುವೆಯ ರೂ.5 ಲಕ್ಷ ಹಣವನ್ನು ಚಾಸಾ 4 ರವರು 2 ನೇ ಆರೋಪಿಗೆ ಆರೋಪಿತರ ಮನೆಯಲ್ಲಿ ನೀಡಿರುತ್ತಾರೆ ಹಾಗೂ 25 ಗ್ರಾಂ ಚಿನ್ನದ ಆಭರಣವನ್ನು 1 ನೇ ಆರೋಪಿಗೆ ಮದುವೆಯ ದಿನ ಹಾಕಿರುತ್ತಾರೆ.

ಮದುವೆಯಾದ 5-6 ವರ್ಷಗಳ ತನಕ ಚಾಸಾ 1/ ಮತ್ತು 1 ನೇ ಆರೋಪಿ ಚೆನ್ನಾಗಿ ಇದ್ದರು. ಆದರೆ ಒಂದು ಮಗು ಆದ ನಂತರ ಅವರ ಕುಟುಂಬದಲ್ಲಿ ಗಲಾಟೆ

ಪ್ರಾರಂಭವಾಗಿರುತ್ತದೆ.

ನಂತರ 1 ನೇ ಆರೋಪಿಯು ಚಾಸಾ 1 ರವರಿಗೆ ಕಿರುಕುಳ ನೀಡುತ್ತಿದ್ದರು. ನಂತರ ಅವರ ಕುಟುಂಬದವರು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೊಡೆಯುವುದು ಬಡಿಯುವುದು ಮಾಡುತ್ತಿದ್ದರು. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದ್ದಾಗಿರುತ್ತದೆ, ಸದರಿ ದಾಖಲೆಯು ಪೊಲೀಸ್ ನೋಟೀಸ್ ಮತ್ತು ಮಹಜರ್ ಆಗಿರುತ್ತದೆ. ಪೊಲೀಸ್ ನೋಟೀಸ್ ಅನ್ನು ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು ಹಾಗೂ ಮಹಜರ್ ಅನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ನಿಪಿ 1, 2 ಕ್ಕೆ ದಿಃ17.02.2023 ರಂದು ಚಾಸಾ 1 ರವರು ವಾಸವಿದ್ದ ಬಾಡಿಗೆ ಮನೆಯ ಬಳಿ ಪೊಲೀಸರು ಸ್ಥಳ ಪಂಚನಾಮೆಗೆ ಬಂದಿದ್ದಾಗ ಹಾಕಿರುತ್ತೇನೆ. ಗಲಾಟೆಯಾದ ಜಾಗವನ್ನು ಚಾಸಾ 1 ತೋರಿಸಿರುತ್ತಾರೆ. ಅಲ್ಲಿ ಪೊಲೀಸರು ನನ್ನ ಮತ್ತು ಚಸಾ 1, 6 ರವರ ಸಮಕ್ಷಮ ನಿಪಿ2 ನ್ನು ಸಂಜೆ 5 ರಿಂದ 5.30 ರ ವರೆಗೂ ಬರೆದಿರುತ್ತಾರೆ. ಸಾಕ್ಷಿಯು ನಿಪಿ3, 4 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದರು, ನಿಪಿ 3, 4 ನ್ನು ಗಲಾಟೆಯಾದ ಮನೆಯ ಬಳಿ ನಿಪಿ 2 ರ ಮಹಜರ್ ಕಾಲದಲ್ಲಿ ತೆಗೆದಿರುತ್ತಾರೆ, ಅದರಲ್ಲಿ ನಾನು, ಚಾಸಾ, 1, 3 ಇದ್ದೇವೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಮದುವೆಯ ಮಾತುಕತೆಯ ಸಮಯದಲ್ಲಿ ಆರೋಪಿತರು ರೂ.10 ಲಕ್ಷ ಹಣ ಮತ್ತು 50 ಗ್ರಾಂ ಚಿನ್ನಕ್ಕೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿ. ನಂತರ ಚಾಸಾ 1 ರವರ ತಂದೆ

ರೂ.5 ಲಕ್ಷ ಹಾಗೂ 25 ಗ್ರಾಂ ಚಿನ್ನ ಕೊಡುತ್ತೇನೆ ಎಂದು ಒಪ್ಪಿರುತ್ತಾರೆ ಎಂದರೆ ಸರಿ. ರೂ.5 ಲಕ್ಷ ಹಣವನ್ನು ಮದುವೆಗೂ 1 ವಾರ ಮುಂಚೆ 1 ನೇ ಆರೋಪಿಗೆ ಚಾಸಾ 4 ರವರು ಅವರ ಮನೆಗೆ ಕರೆಸಿ ನೀಡಿದರು ಎಂದರೆ ಸರಿ. ಮದುವೆಯ ದಿನ 15 ಗ್ರಾಂ ಚೈನ್, 10 ಗ್ರಾಂ ನ ಉಂಗುರವನ್ನು ನೀಡಿರುತ್ತಾರೆ ಎಂದರೆ ಸರಿ.

1 ನೇ ಆರೋಪಿ ಮತ್ತು ಚಾಸಾ 1 ರವರ ನಡುವೆ ಹೊಂದಾಣಿಕೆಯಾಗುತ್ತಿರಲಿಲ್ಲ ಎಂದು ನನಗೆ ಗೊತ್ತಾಗಿ ನಾನು ಇಬ್ಬರನ್ನು ಕೂರಿಸಿಕೊಂಡುಕೇಳಿದಾಗ ಆರೋಪಿತರು ಚಾಸಾ 1 ರವರಿಗೆ ಕೆಲಸ ಬರುವುದಿಲ್ಲ, ನೀನು ಚೆನ್ನಾಗಿ ಇಲ್ಲ ಎಂದು ಚುಚ್ಚು ಮಾತುಗಳಿಂದ ಬೈಯುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯು ಚಾಸಾ 1 ರವರಿಗೆ ಕೈಗಳಿಂದ ಹೊಡೆಯುತ್ತಿದ್ದರು ಹಾಗೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ ಬಗ್ಗೆ ಚಾಸಾ 1 ರವರು ನನಗೆ ತಿಳಿಸುತ್ತಿದ್ದರು ಎಂದರೆ ಸರಿ. ನಂತರ ನಾನು 1 ನೇ ಆರೋಪಿಗೆ ಮದುವೆಯಾದ ಅನುಸರಿಸಿಕೊಂಡು ಹೋಗು ಎಂದು ಬುದ್ಧಿಮಾತು ಹೇಳಿರುತ್ತೇನೆ ಎಂದರೆ ಸರಿ.

ಚಾಸಾ 1 ರವರು ಹೆರಿಗೆಗೆ ತವರಿಗೆ ಹೋಗಿದ್ದರು ಎಂದರೆ ಸರಿ. ಆ ನಂತರವೂ ಸಹಃ ಅವರ ನಡುವೆ ಹೊಂದಾಣಿಕೆಯಾಗಿಲ್ಲ ಎಂದರೆ ಸರಿ. ನಂತರ ನಾನು 1 ನೇ ಆರೋಪಿಗೆ ಚಾಸಾ 1 ಮತ್ತು ಮಗುವನ್ನು ಕರೆದುಕೊಂಡು ಹೋಗು ಎಂದು ಹೇಳಿರುತ್ತೇನೆ ಎಂದರೆ ಸರಿ. ಆಗ 1 ನೇ ಆರೋಪಿಯು ಅವಳಿಗೆ ಬೇರೆ ಮನೆ ಮಾಡಿದರೆ ಮಾತ್ರ ಸಂಸಾರ ಮಾಡುವುದು ಎಂದು ತಿಳಿಸಿರುತ್ತಾರೆ ಎಂದರೆ ಸರಿ.

ನಂತರ 1 ನೇ ಆರೋಪಿಯು ಈಗ ನನಗೆ ಹೆಂಡತಿ-ಮಗು ಬೇಕು ಎಂದು ಎಂ ಸಿ ಸಂ.11/2021 ರಂತೆ ಕಡೂರಿನ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ಆನಂತರ ನಾವುಗಳು ಸೇರಿ ಚಸಾ 1 ಮತ್ತು ಆರೋಪಿತರ ಸಂಬಂಧಿಕರು ಸೇರಿಕೊಂಡು ರಾಜೀ ಪಂಚಾಯಿತಿ ಮಾಡಿಸಿರುತ್ತೇವೆ ಎಂದರೆ ಸರಿ. ಆ ನಂತರ ಚಾಸಾ 1 ರವರನ್ನು ಕರೆದುಕೊಂಡು ಹೋಗಿ 1 ನೇ ಆರೋಪಿಯು ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದರು

ಎಂದರೆ ಸರಿ. ಅಲ್ಲಿಯೂ ಸಹಃ ಹೊಂದಾಣಿಕೆ ಬಂದಿಲ್ಲ ಎಂದರೆ ಸರಿ.

ದಿಃ13.02.2023 ರಂದು ಚಾಸಾ6 ರವರು ಬಾಡಿಗೆ ಮನೆ ಮಾಡಿಕೊಟ್ಟರು ಸಹಃ ನೀನು ಹೊಂದಾಣಿಕೆ ಮಾಡಿಕೊಂಡುಹೋಗುತ್ತಿಲ್ಲ ಎಂದು 1 ನೇ ಆರೋಪಿಗೆ ಬೈದು ಬುದ್ಧಿ ಮಾತು ಹೇಳಿದರು ಎಂದರೆ ಈ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆ ನಂತರ 2-3 ನೇ ಆರೋಪಿತರು ಚಾಸಾ 1 ರವರು ಇದ್ದ ಮನೆಗೆ ಹೋಗಿ ಪುನಾ ಗಲಾಟೆ ಮಾಡಿದರೆ ನಿನ್ನನ್ನು ಸೀಮೆ ಎಣ್ಣೆ ಹಾಕಿ ಸುಟ್ಟು ಕೊಲ್ಲುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಚಾಸಾ 1 ರವರು ಕಡೂರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ.

ನಂತರ ದಿಃ17.02.2023 ರಂದು ಪೊಲೀಸರು ನನಗೆ ಚಸಾ 3 ರವರಿಗೆ ಮಹಜರಿಗೆ ಸಹಕರಿಸುವಂತೆ ಕೋರಿ ನಿಪ 5 ರಂತೆ ನೋಟೀಸು ನೀಡಿದರು ಎಂದರೆ ಸರಿ. ನಿಪಿ 2 ಕ್ಕೆ ನಾನು, ಚಾಸಾ 3, 1 ಸಹಿ ಮಾಡಿರುತ್ತೇವೆ ಎಂದರೆ ಸರಿ. ನಿಪಿ2 ನ್ನು ಸಂಜೆ 4 ರಿಂದ 5.15 ರವರೆಗೂ ಬರೆದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಕೆ ವಿ ಎಂ ವಕೀಲರಿಂದಃ-</u>

ಚಾಸಾ 6 ಮತ್ತು ನಾನು ಸ್ನೇಹಿತರು ಎಂದರೆ ಸರಿ. ಮಾತುಕತೆಯ ಸಮಯದಲ್ಲಿ ನಮ್ಮ ಕಡೆಯಿಂದ 7-8 ಜನ ಹೋಗಿದ್ದೆವು. ಹಣ ಕೊಟ್ಟಿದ್ದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ, ಮಂಜಪ್ಪ ರವರು 1 ನೇ ಆರೋಪಿಗೆ ಹಣ ನೀಡಿರುತ್ತಾರೆ. ರೂ.500/- ಮುಖಬೆಲೆಯಲ್ಲಿ ಹಣ ನೀಡಿರುತ್ತಾರೆ. ಸದರಿ ಹಣವನ್ನು ಬೆಳಗ್ಗೆ ಸು.11 ಗಂಟೆಯಲ್ಲಿ ನೀಡಿರುತ್ತಾರೆ. ಚಾಸಾ 1 ರವರ ಮನೆಯಲ್ಲಿ ಗಲಾಟೆಯಾದ ವಿಚಾರವನ್ನು ಚಸಾ 1 ನನ್ನ ಹೇಳಿರುತ್ತಾರೆ. ಗಲಾಟೆಯನ್ನು ನಾನು ಖುದ್ದಾಗಿ ನೋಡಿಲ್ಲ.

ಚಾಸಾ 1 ರವರ ಮನೆಯಲ್ಲಿ 5 ಎಕರೆ ಜಮೀನು ಇದೆ. ಅವರು ಜಮೀನು ಕೆಲಸ ಬಿಟ್ಟು ಬೇರೆ ಏನು ಮಾಡುವುದಿಲ್ಲ ಎಂದರೆ ಸರಿ. ಚಾಸಾ 4 ರವರಿಗೆ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ 4 ರವರ ಜಮೀನು ಆದಾಯ ಬರುವ ಜಮೀನು

ಅಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಮರವಂಜಿ ಸರ್ಕಲ್ ಬಳಿ ಇರುವ ತಾಹಿತ್ಯ ನಗರದಲ್ಲಿ ಪೊಲೀಸರ ಮುಂದೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿರುತ್ತದೆ. ನನ್ನ ಹೇಳಿಕೆಯನ್ನು ನಾನು ಓದಿರುತ್ತೇನೆ.

ನಾನು ಮತ್ತು ಚಾಸಾ 6 ರವರ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಖುದ್ದು ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 6 ರವರ ಮಾತು ಕೇಳಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.